# ಪ್ರಾಚೀನ ನಾಗರಿಕತೆಯ ಅಥೆನ್ಸ್

■ ಚಿತ್ರ–ಲೇಖನ: **ಪೂರ್ಣಿಮಾ ಮೂರ್ತಿ**


ಆಕ್ರೊಪೊಲಿಸ್ ಎದುರು ಲೇಖಕಿ

ಅಥೆನ್ಸ್ ಇಂದಿನ ಗ್ರೀಸ್ ದೇಶದ ರಾಜಧಾನಿ. ಪ್ರಾಚೀನ ಗ್ರೀಸ್ ದೇಶಕ್ಕೂ ರಾಜಧಾನಿಯಾಗಿ ಮೆರೆದ ನಗರ. ಬೆಂಗಳೂರಿನಿಂದ ಎಮಿರೇಟ್ಸ್ ವಿಮಾನದ ಮೂಲಕ ದುಬೈ ನಂತರ ಅಲ್ಲಿಂದ ಮತ್ತೊಂದು ವಿಮಾನದ ಮೂಲಕ ಅಥೆನ್ಸ್ ತಲುಪಿದಾಗ ಕಾಲಮಾನ ವ್ಯತ್ಯಾಸದಿಂದಾಗಿ ಅಲ್ಲಿನ ರಾತ್ರಿ 8 ಗಂಟೆ ಆಗಿತ್ತು. ನಾವು ಸಂಸಾರ ಸಮೇತ ಏಳು ಜನರ ತಂಡವಾದ್ದರಿಂದ ಅಲ್ಲಿ ಉಳಿದುಕೊಳ್ಳಲು 'ಏರ್‌ಬಿಎನ್‌ಬಿ'ಯ ಅಪಾರ್ಟ್‌ಮೆಂಟ್ ಒಂದನ್ನು ಬುಕ್ ಮಾಡಿದ್ದೆವು. ವಿಮಾನ ನಿಲ್ದಾಣದಿಂದ ಅಪಾರ್ಟ್‌ಮೆಂಟ್‌ಗೆ ತಲುಪಲು ಸಹ 'ಆನ್ ಲೈನ್'ನಿಂದಲೇ ಬುಕ್ ಮಾಡಿದ್ದ ಟ್ಯಾಕ್ಸಿಯ ಡ್ರೈವರ್ ನನ್ನ ಮಗನ ಹೆಸರಿನ ಫಲಕ ಹಿಡಿದು ನಿಲ್ದಾಣದ ಹೊರಗೆ ಬರುತ್ತಿದ್ದಂತೆಯೇ ಕಾಣಿಸಿದರು.

ಇಪ್ಪತ್ತು ಮೈಲಿ ದೂರದ ಸೇರಬೇಕಿರುವ ಜಾಗ ತಲುಪಲು ಮುಕ್ಕಾಲು ಗಂಟೆ ಬೇಕು ಎಂದ ನಮ್ಮ ಡ್ರೈವರ್ ವ್ಯಾನ್ ನಡೆಸುತ್ತಲೇ ಅಥೆನ್ಸಿನ ವಿಶೇಶತೆಗಳನ್ನೆಲ್ಲಾ ತಮ್ಮ ಗ್ರೀಕ್ ಬೆರೆತ ಇಂಗ್ಲಿಷ್‌ನಲ್ಲಿ ವಿವರಿಸಿದ. ಗ್ರೀಕರು ತುಂಬ ಸ್ನೇಹಪರರು.

ಅಪಾರ್ಟ್‌ಮೆಂಟ್ ಒಡತಿ ಲಾರಾ ನಮ್ಮನ್ನು ಸ್ವಾಗತಿಸಿ ನಾಲ್ಕನೆಯ ಮಹಡಿಯಲ್ಲಿದ್ದ ಮನೆ ತೋರಿಸಿದರು. ಈಕೆಯ ಇಂಗ್ಲಿಷ್ ಚೆನ್ನಾಗಿತ್ತು. ಫರ್ನಿಷ್ಡ್ ಅಪಾರ್ಟ್‌ಮೆಂಟ್ ಮೂರು ಬೆಡ್–ರೂಮುಗಳು, ಅಡುಗೆಮನೆ, ಟಾಯ್ಲೆಟ್‌ಗಳಿಂದ ಕೂಡಿತ್ತು. ಅಂದಿನ ರಾತ್ರಿಯೂಟ ಬೆಂಗಳೂರಿನಿಂದ


ಓಡಿಯನ್ ಆಫ್ ಹೆರಡಸ್ ಅಟ್ಟಿಕಸ್